ಸಿಮಿಯ ಕೋಣೆಯಲ್ಲಿ ಮಾತ್ರ ದೀಪ ಉರಿಯುತ್ತಿತ್ತು. ಹೋಗಿ ನೋಡಿದರೆ ಏನೋ ಗಣಿತ ಬಿಡಿಸುತ್ತ ಕೂತಿದ್ದಳು. "ಹೋಮ್‌ವರ್ಕೇನು ಪುಟ್ಟಾ?" ಎಂದು ಹಿಂದಿನಿಂದ ಅವಳ ನೆತ್ತಿ ಮೂಸಿದೆ. "ಹೂಂ" ಎಂದಳು. "ಜೊತೆಗೆ ಊಟ ಮಾಡೋಣ ಬರ್ತೀಯಾ? ಐಸ್ಕ್ರೀಮ್ ತಕ್ಕೊಡ್ತೀನಿ" ಅಂದೆ. "ನಂದಾಯ್ತು ಡ್ಯಾಡಿ, ಡಿಸ್ಟರ್ಬ್ ಮಾಡಬೇಡ" ಅಂದಳು. ಅವಳ ಪುಟ್ಟ ಬಾಯಲ್ಲಿ ಡಿಸ್ಟರ್ಬ್ ಅಂತೆಲ್ಲ ಕೇಳಿ ನನಗೂ ಲಹರಿ ಬಂದಂತಾಯಿತು. ಮೆಲ್ಲಗೆ ಅವಳ ಕಂಕುಳಲ್ಲಿ ಬೆರಳಾಡಿಸಿ, "ಬರ್ತೀಯಾ ಇಲ್ವಾ? ಈಗ ನೀನು ಬರ್ತೀನಿ ಅಂದರಷ್ಟೇ ನಾನು ನಿಲ್ಲಿಸೋದು" ಎನ್ನುತ್ತ ಕಚಗುಳಿಯಿಡತೊಡಗಿದೆ. ಮೊದಲಿನಂತೆ ಕಿಲಕಿಲ ನಗದೇ, "ಸ್ಟಾಪ್ ಡ್ಯಾಡಿ" ಎನ್ನುತ್ತ ದೇಹ ಸೆಟೆದುಕೊಂಡಂತೆ ಮಾಡಿ ಒಮ್ಮೆಲೇ ದೂರ ಸರಿದು ನಿಂತಳು. ತಿರುಗಿ ನಿಂತವಳ ಮೂಗಿನ ಹೊಳ್ಳೆಗಳು ಅರಳಿದ್ದವು. ಕಣ್ಣು ದುರುಗುಟ್ಟುತ್ತಿತ್ತು. "ಒಮ್ಮೆ ಸ್ಟಾಪ್ ಅಂದರೆ ಗೊತ್ತಾಗುವುದಿಲ್ಲವೇನು ನಿನಗೆ? ಸ್ಟಾಪ್ ಟಚ್ಚಿಂಗ್ ಮೀ ವಿದೌಟ್ ಮೈ ಪರ್ಮಿಷನ್. ನೌ ಗೆಟ್ ಔಟ್ ಆಫ್ ಮೈ ರೂಮ್" ಎಂದು ಬೆನ್ನಿಗೆ ಧಡಾರನೆ ಬಾಗಿಲು ಹಾಕಿದಳು.

ಸಿಮಿಯ ಬಾಯಲ್ಲಿ ಬಂದ 'ಗೆಟ್ ಔಟ್' ಶಬ್ದ ಕೆನ್ನೆಗೇ ಬಂದು ಬಾರಿಸಿದಂತಾಯಿತು. ನನ್ನೆರಡೂ ಅಂಗೈಯಲ್ಲೇ ಹಿಡಿಸುತ್ತಿದ್ದ ಪುಟ್ಟಿ ಇಷ್ಟು ಬೇಗ ಬೆಳೆದುಬಿಟ್ಟಳೇನು?

ನಮ್ಮ ಬೆಡ್‌ರೂಮಿಗೆ ಹೋದಾಗ ಲಾವಣ್ಯಳೂ ದೀಪವಾರಿಸಿ ಮಲಗಿಬಿಟ್ಟಿದ್ದಳು. ಹತ್ತಿರ ಹೋಗಿ, "ಲಾವಣ್ಯಾ" ಅಂದೆ. "ಲೇಟಾಯ್ತಲ್ಲ" ಅಂದಳು. ಮಗ್ಗುಲಾಗಿ ಮಲಗಿದವಳ ತಿರುಗಿಸಿ ಅವಳ ಎದೆಯ ಮೇಲೆ ಒರಗಿದೆ. "ಇವತ್ತು ಬೇಡ" ಅಂತ ನೂಕಿದಳು. ನನಗೂ ಆವತ್ತು ಬೇಕಿರಲಿಲ್ಲ. ಆದರೂ ಅವಳು ನೂಕಿದ ರಭಸಕ್ಕೆ ಮುಖಭಂಗವಾದಂತಾಯಿತು. "ಯಾಕೆ ಬೇಡ?" ಅಂತ ಸಿಡುಕಿದೆ. "ನನಗೆ ಇಷ್ಟವಿಲ್ಲ" ಅಂದಿದ್ದು ಕಂಡು ಇನ್ನಷ್ಟು ರೇಗಿತು. ಲಾವಣ್ಯ ಹಿಂದೆಂದೂ ಈ ಮಾತನ್ನು ಅಂದಿರಲಿಲ್ಲ. ತಲೆ ನೋವು, ಹೊಟ್ಟೆ ನೋವು, ಮುಟ್ಟು, ಸೊಂಟ ಉಳುಕಿದೆ, ಪಿತ್ತ ಆಗಿದೆ ಈ ಎಲ್ಲ ಕಾರಣಗಳನ್ನು ಕೊಟ್ಟು ಬೇಡ ಎನ್ನುವುದು ಬೇರೆ. ಆದರೆ, ಇಷ್ಟವಿಲ್ಲ ಅಂದರೆ? ಏನದರ ಅರ್ಥ? ಇವೆಲ್ಲದರ ಹಿಂದೆ ಯಾರ ಹಿಕಮತ್ತಿದೆ ನನಗೆ ಗೊತ್ತಿಲ್ಲ ಅಂದುಕೊಂಡಿದ್ದಾರೇನು? ಮುಷ್ಟಿಗಟ್ಟಿದ ಅಂಗೈಯನ್ನು ಬಿಗಿ ಹಿಡಿದು ಬೆಡ್‌ರೂಮಿನಿಂದ ಹೊರ ನಡೆದು ಬಂದೆ.

ಇಂಥ ಆಘಾತ ನನಗೆಂದೂ ಆಗಿರಲಿಲ್ಲ. ಊಟವಿಲ್ಲದೇ ಹೊಟ್ಟೆ ಬಣಬಣ ಎನ್ನುತ್ತಿತ್ತು. ಡೈನಿಂಗು ಟೇಬಲ್ಲಿನ ಮೇಲೆ ಮುಚ್ಚಿಟ್ಟ ಅನ್ನ ಸಾರು ಪಲ್ಯಗಳ ಡಬರಿಗಳು ಅಣಕಿಸುವಂತೆ ಕಂಡವು. ಎಲ್ಲವೂ ನನ್ನ ಕೈಜಾರಿ ಹೋಗುತ್ತಿರುವಂತೆ ಭಯವಾಯಿತು. ಮುಂದಿನ ಕೆಲ ಗಂಟೆಗಳಲ್ಲಿ ತೆಗೆದುಕೊಳ್ಳಲಿದ್ದ ನಿರ್ಣಯವೂ ಆಗಲೇ ನನ್ನ ಕೈ ಮೀರಿ ಹೋಗಿತ್ತು. ಮುಂಜಾನೆ ಹಕ್ಕಿಗಳ ಚಿಲಿಪಿಲಿ ಶುರುವಾಗುವ ತನಕ ಬಿಟ್ಟ ಕಣ್ಣು ಬಿಟ್ಟ ಹಾಗೆ ಸೋಫಾದಲ್ಲಿ ಕುಳಿತೇ ಇದ್ದೆ.

ಕೊನೆಗೆ ಇನ್ನೇನು ಸೂರ್ಯ ಏಳುತ್ತಾನೆ, ಎಲ್ಲೆಡೆ ಬೆಳಕೇರುತ್ತದೆ ಎಂಬಂಥ ಕ್ಷಣದಲ್ಲಿ ದಾದಾನ ಫೋನಿಗೆ ಕರೆ ಹಚ್ಚಿ, "ಗೋ ಅಹೆಡ್" ಅಂದೆ.

### ಕಾವ್ಯಾ ಕಡಮೆ

ಉತ್ತರ ಕನ್ನಡ ಜಿಲ್ಲೆಯ ಕಡಮೆಯವರು. ಸದ್ಯ ಅಮೆರಿಕದ ನ್ಯೂಜೆರ್ಸಿಯಲ್ಲಿ ವಾಸ. ಪ್ರಕಟಿತ ಕೃತಿಗಳು: 'ಧ್ಯಾನಕೆ ತಾರೀಖಿನ ಹಂಗಿಲ್ಲ', 'ಜೀನ್ಸ್ ತೊಟ್ಟ ದೇವರು' (ಕವನ ಸಂಕಲನಗಳು), 'ಪುನರಪಿ' (ಕಾದಂಬರಿ), 'ಆಟದೊಳಗಾಟ ಮತ್ತು ಡೋರ್ ನಂಬರ್ ಎಂಟು' (ನಾಟಕಗಳು), 'ದೂರ ದೇಶವೆಂಬ ಪಕ್ಕದ ಮನೆ' (ಪ್ರಬಂಧ ಸಂಕಲನ).